ಜಾಕೋಬ್ ಡಿಸೋಜ, ಕುರುವಳ್ಳಿ
*ಪ್ರಾಮಾಣಿಕತೆ ಎಲ್ಲಿದೆ ಹುಡುಕಿಕೊಡ್ತೀರಾ... ಪ್ಲೀಸ್...?*




ಪ್ರೊಫೆಸರ್ ಜಿ.ವೆಂಕಟಸುಬ್ಬಯ್ಯನವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಿಘಂಟಿನ ಆರನೆಯ ಸಂಪುಟದ 6025ನೆಯ ಪುಟದ 33ನೆಯ ಸಾಲಿನಲ್ಲಿ!

ಡಿ.ಕೆ.ರಾಜ್ ಗದಗ
*ರೈತ ದೇಶದ ಬೆನ್ನೆಲುಬಾದರೆ ರಾಜಕಾರಣಿ?*
ಬೋನ್ ಕ್ಯಾನ್ಸರ್!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ
*ಹೆಂಡತಿಯ ಮೆಚ್ಚುಗೆಗೆ ಪಾತ್ರನಾದ ಗಂಡನನ್ನು ನೀವು ಕಾಣಿರಾ?*
ಓ! ಆದರೆ ಒಂದೇ ಕೊರತೆ ಮೆಚ್ಚುಗೆ ಪಡೆದದ್ದು ಹೌದು, ಆದರೆ ಸ್ವಂತ ಹೆಂಡತಿಯದ್ದಲ್ಲ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ವಿದ್ಯುತ್‌ಗೂ, ವಿದ್ವತ್‌ಗೂ ಏನು ವ್ಯತ್ಯಾಸ?*
ವಿದ್ಯುತ್ ಹೋಗುವಂಥದ್ದು, ವಿದ್ವತ್ ಉಳಿಯುವಂಥದ್ದು!

ಎಸ್.ವಿ. ಶ್ರೀನಿವಾಸ್, ಮೈಸೂರು
*ಅ-ಕಾರಕ್ಕೂ, ಹ-ಕಾರಕ್ಕೂ ವ್ಯತ್ಯಾಸವೇನು?*
ನಾಲಿಗೆ ಒರಲಿದರೆ ಅ, ನಾಲಿಗೆ ಹೊರಳಿದರೆ ಹ!

ನಾ.ರಾ.ಕೃ.ರೆಡ್ಡಿ, ನಾರಾಯಣಘಟ್ಟ
*ಗೌಡರು ತಮ್ಮ ಮೂಗನ್ನು ಬಲಗೈ ಹೆಬ್ಬೆಟ್ಟಿನಿಂದ, ರಾಜ್ಯಪಾಲರು ಎಡಗೈ ಹೆಬ್ಬೆಟ್ಟಿನಿಂದ ಸವರಿಕೊಳ್ಳುತ್ತಾರೆ?*



ಇವರು ಈ ಕಡೆಯಿಂದ ಅವರು ಆ ಕಡೆಯಿಂದ ಬಿಜೆಪಿ ಸರ್ಕಾರದ ವಿರುದ್ಧ ಮೂಗು ಮುರಿಯುತ್ತಿದ್ದುದರ ಸಂಕೇತ!

ಪಿ.ಜೆ. ರಾಘವೇಂದ್ರ, ಮೈಸೂರು
*ನಿಮ್ಮ ಉತ್ತರಕ್ಕೆ ಬಹುಮಾನ ನೀಡಬೇಕೆಂದಿದ್ದೇನೆ. ನಿಮ್ಮ ವಿಳಾಸ ಕೊಡ್ತೀರಾ?*
ಬರೀ ಉತ್ತರದಿಕ್ಕಿನ ಪಕ್ಷಪಾತಿಯಾಗದೆ ನನ್ನ ದಕ್ಷಿಣಕ್ಕೆ, ಪೂರ್ವಕ್ಕೆ, ಪಶ್ಚಿಮಕ್ಕೆ ಇರುವವರಿಗೂ ಬಹುಮಾನ ಕೊಡುವುದಾದರೆ ಕೊಡುತ್ತೇನೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಮನುಷ್ಯನಿಗೆ ಮೂಗೇ ಇಲ್ಲದಿದ್ದರೆ ಏನಾಗುತ್ತಿತ್ತು?*
ಮೂಗು ಮುರಿಯುವುದು, ಮೂಗು ತೂರಿಸುವುದು ತಪ್ಪುತ್ತಿತ್ತು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಮಂಗನಿಂದ ಮಾನವ ಎನ್ನುತ್ತಾರೆ; ನಿಜವಿರಬಹುದೆ?*
ಆದರೆ... ಹುಡುಗಿಯ ಕೈಗೆ ಸಿಕ್ಕ ಹುಡುಗ ಮಂಗ ಆಗುವುದರಿಂದ ... ನನಗೂ ಸಂಶಯವೇ!

ಬಿ.ಚಂದ್ರೇಗೌಡ, ಬೆಂಗಳೂರು
*ಲಿವಿಂಗ್ ಟುಗೆದರ್ ಎಂದರೆ ನಿಜವಾಗಿ ಏನು?*
ಸಕ್ರಮ ಆಗುತ್ತೋ ಇಲ್ಲವೋ ಎಂದು ತಿಳಿಯಲು ಮಾಡುವ ಅಕ್ರಮ!

ರತ್ನ ಅಶೋಕ ಗೊರವರ, ಮೊರಬ
*ತಮ್ಮ ಮೇಲೆ ಬಂದ ಅಪವಾದಗಳನ್ನು ನೀಗಿಕೊಳ್ಳಲು ಈಗಿನ ಸೀತೆಯರಿಗೂ ಅಗ್ನಿಪರೀಕ್ಷೆ ಇದ್ದಿದ್ದರೆ ಏನಾಗುತ್ತಿತ್ತು?*
ರಾತ್ರಿ ಹತ್ತುಗಂಟೆಗೆ ಸರಿಯಾಗಿ ಬರ್ನ್ಸ್ ಅಲೈವ್ ರಿಯಾಲಿಟಿ ಶೋ ನೇರಪ್ರಸಾರವಾಗುತ್ತಿತ್ತು!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
*ರಾಜಕೀಯವೆಂಬ ರೈಲು ಹಳಿ ತಪ್ಪಿದರೆ?*
ಹುಚ್ಚಪ್ಪ! ಹಳಿ ತಪ್ಪದಿದ್ದರೆ ಅದನ್ನು ರಾಜಕೀಯ ಎಂದು ಯಾರು ಕರೆದಾರು!

ಎ.ಎಸ್.ಸ್ವಾಮಿ, ಶೋರಾಪುರ
*ಆಷಾಢದಲ್ಲಿ ಮದುವೆಯಾದರೆ ಏನಾಗುತ್ತೆ?*
ಚೈತ್ರದಲ್ಲಿ ಮಗು ಆಗುತ್ತೆ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ
*ನಗುವವನ್ನು ಚಂದ್ರನಿಗೆ ಹೋಲಿಸುತ್ತಾರೆ, ಸೂರ್ಯನಿಗೆ ಏಕೆ ಹೋಲಿಸುವುದಿಲ್ಲ?*
ಚಂದ್ರ ರಿಸೆಪ್ಷನಿಷ್ಟ್‌ಳನ್ನು, ಸೂರ್ಯ ಬಾಸ್‌ಅನ್ನು ಹೋಲುವುದರಿಂದ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮ ಪ್ರಧಾನಿಗಳು ದಂತವೈದ್ಯರ ಬಳಿಯೂ ಬಾಯಿ ತೆರೆಯುವುದೇ ಇಲ್ಲವಂತಲ್ಲಾ...?*
ತೆಗೆದರೆ ಹೈಕಮಾಂಡ್ ಹಲ್ಲು ಉದುರಿಸುತ್ತಾರೆ ಎಂಬ ಭಯವಂತೆ!

ಬಿ.ಎಸ್.ಮಳ್ಳೂರ, ಹಲಗತ್ತಿ
*ಮಿಕ್ಸಿಗೂ, ಹೆಂಡತಿಗೂ ಏನು ವ್ಯತ್ಯಾಸ?*
ಮಿಕ್ಸಿಗೆ ಎಕ್ಸ್‌ಚೇಂಜ್ ಆಫರ್ ಇರುತ್ತದೆ!

## ಬಹುಮಾನಿತ ಪ್ರಶ್ನೆ

ಮನೋರಮಾ ಪ್ರಭು, ಕಾಸರಕೋಡ
*ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಏಕೆ?*
ಎತ್ತಿಗೆ ಎಮ್ಮೆಲ್ಲೆ ಸ್ಟೇಟಸ್ ಮತ್ತು ಎಮ್ಮೆಗೆ ವೋಟರ್ ಸ್ಟೇಟಸ್ ಆದ್ದರಿಂದ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ಹದಿವಯಸ್ಸಿನ ಸೌಂದರ್ಯವನ್ನು ಮುಪ್ಪಿನಲ್ಲಿರುವ ಜನರು ಬಾಯಿ ಬಿಟ್ಟು ನೋಡಲು ಕಾರಣ?*
Boy ಆಗಿದ್ದಾಗ ಇಂತಹದ್ದೊಂದು ಕಾಣಲಿಲ್ಲವಲ್ಲಾ ಎಂಬ ದಿಗ್ಭ್ರಮೆ!

ಆನಂದ್ ಕುಮಾರ್, ಚಿತ್ರದುರ್ಗ
*ಆವರಣಕ್ಕೆ ಪ್ರತಿಯಾಗಿ ಅನಾವರಣ ಬರೆಯಲು ಜ್ಞಾನಪೀಠಿಗಳು ಸಿದ್ಧರಾಗಿದ್ದಾರಂತೆ, ನಿಜವೇ?*
ಆದರೆ ಪೀಠದಲ್ಲಿ ಕುಳಿತಾಗ ಜ್ಞಾನವೇ ಇಲ್ಲದಂತಾಗುತ್ತಿದೆಯಂತಲ್ಲಾ, ಅಕಟಕಟಾ!

ಮಹೇಶ್ ಹೆಗಡೆ, ಹೆಗ್ಲೆ
*ಅತಿ ಹೆಚ್ಚು ಸುಳ್ಳು ಹೇಳುವವರು ಯಾರು-ಹುಡುಗಿಯರೋ, ರಾಜಕಾರಣಿಗಳೋ?*



ಇದು ಬೇವು ಹೆಚ್ಚು ಕಹಿಯೋ, ಹಾಗಲ ಹೆಚ್ಚು ಕಹಿಯೋ ಎಂದಂತಾಯಿತು!

ಎಂ.ಜಿ.ನೇಹರ್ವಣಿ, ಬಳ್ಳಾರಿ
*ರಾಜಕೀಯವೆಂಬ ಮಹಾಭಾರತದಲ್ಲಿ ಪಾಂಡವರಾರು, ಕೌರವರಾರು?*
ಈಗ ಕಾಣುವವರೆಲ್ಲಾ ಕೌರವರೇ; ಪಾಂಡವರು ಅಜ್ಞಾತವಾಸದಲ್ಲಿದ್ದಾರಂತೆ!

ಕೆ.ಆರ್.ನ. ಪ್ರಸಾದ್, ಮೈಸೂರು
*ಗಲ್ಲಿಗಲ್ಲಿಗಳಲ್ಲಿ ದೇವಸ್ಥಾನ, ಅಲ್ಲೆಲ್ಲಾ ಸಾವಿರಾರು ಭಕ್ತರು; ಆದರೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆಯಲ್ಲಾ?*
ದೇಗುಲದ ಆಚಾರವನ್ನೇ ಹೊರಗೂ ಅನುಸರಿಸುತ್ತಿರುವರಷ್ಟೆ; ನೈವೇದ್ಯ ನೀಡಿದವರಿಗೆ ಮಾತ್ರ ಪ್ರಸಾದ!

ಗೀತಾ ಬರ್ಲ, ಅಮ್ಮೆ
ಕಮಲಾನಂದ, ರಮಾನಂದ, ಸತ್ಯಾನಂದ, ನಿತ್ಯಾನಂದ... ಕಡೆಯಲ್ಲಿ ಈ 'ಆನಂದ' ಸೇರಿಸಿಕೊಳ್ಳುವುದೇಕೆ?
ಅದು 'ಆನಂದ' ಅಲ್ಲ; ಕಮಲಾಳನ್ನು ಬೈದ ಎನ್ನಲು ಕಮಲಾನಂದ, ನಿತ್ಯಾಳನ್ನು ಬೈದವನು ನಿತ್ಯಾನಂದ...

■ ರಾಮ್